2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ನಂಜನಗೂಡು

**ಸಿ. ಸಿ. ನಂ.ಃ733/19**

ಆರೋಪಿಯ ಹೆಸರು ರವಿಶಂಕರ್ ಬಿನ್ ಲೇಃಪುಟ್ಟಣ್ಣ, 45 ವರ್ಷ,

ವಾಸ್ತವ್ಯ ಶಿವಶಕ್ತಿ ತೋಟಗಾರಿಕೆ ಮತ್ತು ಇಟ್ಟಿಗೆ ಫಾರಂ ಹೌಸ್, ದೇಬೂರು, ನಂಜನಗೂಡ ತಾಲ್ಲೂಕು.

ಅ. ಪ್ರ. ಸಂ. ಕಲಂ 313ರನ್ವಯ ಆರೋಪಿಯ ಹೇಳಿಕೆ

ಪ್ರಶ್ನೆ 1ಃ ನೀವು ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ?

ಉತ್ತರ ಃ

ಪ್ರಶ್ನೆ 2ಃ ಫ್ರಾಸಾ-1 ಹೆಚ್.ಎಂ.ನಟರಾಜು, ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ ಆರೋಪಿಯಾದ ನೀವು ಹಾಗೂ ಫ್ರಾಸಾ-1 ರವರು ಸಂಬಂಧಿಕರಾಗಿದ್ದು, ಫಿರ್ಯಾದುದಾರರಿಂದ ದಿಃ05.11.2018 ರಂದು ರೂ.25,00,000/- ಗಳನ್ನು ನಿಮ್ಮ ತುರ್ತು ಅವಶ್ಯಕತೆಗಾಗಿ ಕೈಸಾಲವಾಗಿ ಪಡೆದುಕೊಂಡು ಸದರಿ ಸಾಲವನ್ನು ಒಂದು ವಾರದೊಳಗೆ ನಿಮ್ಮ ಕಟ್ಟಡದ ಮಾರಾಟದ ವ್ಯವಹಾರವನ್ನು ಪೂರ್ಣಗೊಳಿಸಿದ ನಂತರ ಮರುಪಾವತಿ ಮಾಡುವುದಾಗಿ ಒಪ್ಪಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 3 ಫ್ರಾಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಆರೋಪಿಯಾದ ನೀವು ಸದರಿ ಸಾಲದ ಬಾಬ್ತು ನಿಮ್ಮ ಖಾತೆ ಹೊಂದಿರುವ ಐಸಿಐಸಿಐ ಬ್ಯಾಂಕ್, ಚೆಕ್ ನಂ 107802 ಅನ್ನು ದಿ.26.12.2018 ಗೆ ರೂ.25,00.000/- ಎಂದು ನಮೂದಿಸಿ ಫ್ರಾಸಾ-1 ರವರಿಗೆ ನೀಡಿದ್ದು ಸದರಿ ಚೆಕ್ಕನ್ನು ಫ್ರಾಸಾ-1 ರವರು ನಗದೀಕರಣ ಪಡಿಸಲು ಅವರ ಖಾತೆಯಿರುವ ಹೆಚ್ ಡಿ ಎಫ್ ಸಿ ಬ್ಯಾಂಕ್, ನಂಜನಗೂಡು ಶಾಖೆಗೆ ಹಾಜರುಪಡಿಸಿದಾಗ ಆರೋಪಿಯಾದ ನಿಮ್ಮ ಖಾತೆಯಲ್ಲಿ "ಅಕೌಂಟ್ ಕ್ಲೋಸ್" ಎಂಬ ಹಿಂಬರಹದೊಂದಿಗೆ ದಿ.28.12.2018 ರಂದು ವಾಪಸ್ಸು ಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 4 ಫ್ರಾಸಾ-1 ರವರು ಮುಂದುವರೆದು ಅವರ ಪರ ವಕೀಲರ ಮೂಲಕ ದಿಃ18.01.2019 ರಂದು ಕಾನೂನು ರೀತ್ಯಾ ನೋಟಿಸನ್ನು ನೀಡಿದ್ದು, ಸದರಿ ನೋಟೀಸ್‌ಗೆ ಆರೋಪಿಯಾದ ನೀವು ಅಸಮಂಜಸವಾದ ಉತ್ತರವನ್ನು ನೀಡಿದ್ದು, ಈ ರೀತ್ಯಾ ನೀವು ಹಣವನ್ನು ಮರುಪಾವತಿ ಮಾಡದೆ ಕಲಂ 138 ನೆಗೋಶಿಯಬಲ್ ಇನ್ಸ್ಟ್ರುಮೆಂಟ್ ಆಕ್ಟ್ ಪ್ರಕಾರ ಅಪರಾಧ ಮಾಡಿರುವಿರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ

ಪ್ರಶ್ನೆ 5ಃ ನಿಮಗೆ ಇನ್ನೂ ಏನಾದರೂ ಹೇಳುವುದು ಇದೆಯಾ?

ಉತ್ತರ ಃ

ಪ್ರಶ್ನೆ 6ಃ ನಿಮ್ಮ ಪರ ಸಾಕ್ಷಿ ವಿಚಾರಣೆ ಮಾಡುವಿರಾ ?

ಉತ್ತರ ಃ

**ಫಿರ್ಯಾದುದಾರರ ಪರ ಸಾಕ್ಷಿದಾರರ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕಃ09.11.2022 ರಂದು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.**

2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ.
ನಂಜನಗೂಡು